# ಕಥೋಪದೇಶ

## ಸಕಾಲಕ್ಕೆ ಬರುತ್ತೇನೆ

ಕಥೆ : ಮಂಗಳಮ್ಮ



ಒಂದು ಕಾಡಿನಲ್ಲಿ ಒಬ್ಬ ಸಾಧುವಿನ ಕುಟೀರವಿತ್ತು. ಊರಿನಲ್ಲಿ ಒಂದು ದಿನ ಅವನು ಭಿಕ್ಷೆಗಾಗಿ ಬೀದಿಯಲ್ಲಿ ಸಾಗುತ್ತಿದ್ದಾಗ ಓರ್ವ ಮಹಿಳೆ ಬಂದು "ಸ್ವಾಮಿ, ನನ್ನೊಡತಿ ತಮ್ಮನ್ನು ಮನೆಗೆ ಭಿಕ್ಷೆಗಾಗಿ ಆಹ್ವಾನಿಸುತ್ತಿದ್ದಾಳೆ. ದಯಮಾಡಿಸಬೇಕು" ಎಂದಳು. ಅವಳು ಸೂಚಿಸಿದ ಮನೆಯತ್ತ ಕತ್ತೆತ್ತಿ ನೋಡಿ, ಕರೆಯಬಂದ ಮಹಿಳೆಗೆ "ಇಂದಲ್ಲ, ಇನ್ನೊಮ್ಮೆ ಸಕಾಲಕ್ಕೆ ಬರುತ್ತೇನೆ" ಎಂದು ಹೇಳಿ ಮುಂದೆ ಸಾಗಿದ. ಇದನ್ನು ತಿಳಿದ ಆ ಯುವತಿಗೆ ಮುಖಭಂಗವಾದಂತಾಯಿತು. ಅವಳು ಆ ಊರಿನ ಪ್ರಸಿದ್ಧ ವೇಶ್ಯೆ. ಆ ಸಾಧುವಿನ ಆಕರ್ಷಕ ಸುಲಕ್ಷಣ ಶರೀರಕ್ಕೆ ಮಾರುಹೋಗಿ, ಅವನನ್ನು ಹೇಗಾದರೂ ತನ್ನವನನ್ನಾಗಿ ಮಾಡಿಕೊಳ್ಳಲೇಬೇಕೆಂಬ ಛಲ ಅವಳಲ್ಲಿ ಹೆಡೆ ಎತ್ತಿತ್ತು. ಭಿಕ್ಷೆಗೆ ಬರುವ ಸಮಯಕ್ಕೆ ಬೀದಿಗೆ ದಾಸಿಯರನ್ನು ಕಳಿಸಿ ಬರಲು ಹೇಳಿಕಳಿಸುತ್ತಿದ್ದಳು. ಸಾಧುವಿನದು ಒಂದೇ ಉತ್ತರ: "ಇನ್ನೊಮ್ಮೆ ಸಕಾಲಕ್ಕೆ ಬರುತ್ತೇನೆ!"

ಕಾಲಚಕ್ರ ಉರುಳಿತು. ವೇಶ್ಯೆಯ ಅಷ್ಟಮದಗಳು ಇಳಿಮುಖವಾದವು. ಈಗ ಅವಳು ಕಬ್ಬನ್ನು ಅಗಿದು ರಸಹೀರಿ, ಉಗಿದ ಸಿಪ್ಪೆಯಂತಿದ್ದಾಳೆ. ಒಂದು ಕೊಲೆಯ ಆರೋಪದಲ್ಲಿಯೂ ಸಿಕ್ಕಿ ಶಿಕ್ಷೆಗೆ ಗುರಿಯಾಗಿದ್ದಳು. ಕಣ್ಣು ಮಂಜಾಗಿತ್ತು. ಶರೀರ ರೋಗದ ಬೀಡಾಗಿತ್ತು. ಶಿಕ್ಷೆ ಜಾರಿಯಾಯಿತು : "ಕೈಕಾಲುಗಳಿಗೆ ಸರಪಳಿ ಕಟ್ಟಿ ಅವಳ ಕೆಟ್ಟಕೆಲಸಗಳನ್ನು ಸಾರುತ್ತಾ, ಊರಾಚೆಗಿನ ಕಾಡಿನಲ್ಲಿ ಬಿಡತಕ್ಕದ್ದು. ಯಾರೂ ಅವಳಿಗೆ ಅನ್ನ ಪಾನಾದಿಗಳನ್ನು ಕೊಡಕೂಡದು." ಅವಳು ಶಿಕ್ಷೆಯನ್ನು ಸ್ವಾಗತಿಸಿದಳು. ತನ್ನ ಹಿಂದಿನ ಕಾರ್ಯಗಳನ್ನು ನೆನೆನೆನೆದು ಪಶ್ಚಾತ್ತಾಪದಿಂದ ಹೃದಯ ಬೇಯುತ್ತಿತ್ತು. "ತನ್ನಿಂದ ಎಷ್ಟು ಸಂಸಾರಗಳು ಹಾಳಾದವು. ಎಷ್ಟು ಜನರನ್ನು ದುರ್ಮಾರ್ಗಕ್ಕೆ ಎಳೆದೆ!" ಎಂದು ನೋಯುತ್ತಿದ್ದಳು.

ಶಿಕ್ಷೆ ಜಾರಿಗೊಳಿಸಿ ಕಾಡಿನಲ್ಲಿ ಅವಳನ್ನು ಬಿಟ್ಟು ಭಟರು ಹೊರಟುಹೋದರು. ಈಗ ಅವಳು ಒಂಟಿ ! ಅನಾಥೆಯಾಗಿ ಬಿದ್ದಿದ್ದಾಳೆ. ಆಗ ಅಮೃತಧಾರೆಯಂತೆ ವಾಣಿಯೊಂದು ಕಿವಿಗೆ ಬಿತ್ತು. "ತಂಗಿ, ಚಿಂತಿಸಬೇಡ, ನಾನು ಬಂದಿದ್ದೇನೆ." ಈ ಮಾತು ಅವಳಿಗೆ ಹರ್ಷದಾಯಕವಾಗಿತ್ತು. ಆದರೆ ಮ್ಲಾನವದನೆಯಾಗಿ ಹೇಳಿದಳು : "ಸ್ವಾಮಿ, ನೀವು ಬರುತ್ತೀರೆಂಬ ಒಂದು ಆಶಾಕಿರಣ ನನ್ನ ಮನದ ಮೂಲೆಯಲ್ಲಿತ್ತು. ಆದರೆ ನೀವು ತಡವಾಗಿ ಬಂದಿರಿ. ಮೊದಲು ನಿಮ್ಮನ್ನು ಕಂಡಾಗ ಕಾಮುಕ ಭಾವನೆಯಿತ್ತು. ಅನಂತರ ನಿಮ್ಮನ್ನು ಕಾಣುವ ಬಯಕೆ ಅಧಿಕವಾಯ್ತು. ನನ್ನ ತಪ್ಪಿನ ಅರಿವಾಯ್ತು. ನಿಮ್ಮ ದರ್ಶನ ಮಾಡಿ ಕ್ಷಮೆ ಬೇಡಿಕೊಳ್ಳಲು ಮನ ಕಾತರಿಸುತ್ತಿತ್ತು. ಈಗ ಕಣ್ತುಂಬ ನಿಮ್ಮನ್ನು ನೋಡಲೂ ಆರೆ, ಕೈಮುಟ್ಟಿ ಸೇವೆ ಮಾಡಲೂ ಅಶಕ್ತೆ" ಎಂದು ಕಣ್ಣೀರು ಹರಿಸಿದಳು. ಸಾಧು, "ನಾನು ಹೇಳಿದ್ದಂತೆ 'ಸಕಾಲಕ್ಕೆ' ಬಂದಿದ್ದೇನೆ. ಅಂದು ನಿನಗೆ ಎಲ್ಲವೂ ಇತ್ತು. ಅದೇ ಶಾಶ್ವತವೆಂದು ತಿಳಿದಿದ್ದೆ. ಇಂದು ನಿನಗೆ ಏನೂ ಇಲ್ಲ. ನಿನ್ನ ಹೃದಯ ಪಶ್ಚಾತ್ತಾಪದ ಪ್ರಾಯಶ್ಚಿತ್ತದಿಂದ ಶುದ್ಧವಾಗಿದೆ. ಏಳು! ಉಳಿದ ಆಯುಸ್ಸನ್ನು ಭಗವಂತನ ಸ್ಮರಣೆಯಿಂದ ಸಾರ್ಥಕಪಡಿಸಿಕೊ" ಎಂದು ಕೈಹಿಡಿದು ಎತ್ತಿ ಕುಟೀರದ ಕಡೆ ಹೆಜ್ಜೆ ಹಾಕಿದ, ದೀನರಲ್ಲಿ ದೈವವನ್ನು ಕಂಡ ಸಾಧು!

**"ಅಗಿದು ರಸಹೀರಿ ಉಗಿದ ಕಬ್ಬಿನ ಸಿಪ್ಪೆಯನ್ನೂ ಒಬ್ಬ ಕುಶಲಿ ಶುದ್ಧಗೊಳಿಸಿ, ಬಣ್ಣಕಟ್ಟಿ ಸುಂದರ ವಸ್ತುವನ್ನಾಗಿ ಮಾಡಿ ಸಾರ್ಥಕಗೊಳಿಸುತ್ತಾನೆ. ಹಾಗೆ ಮಾನವೀಯತೆಯ ಕುಶಲಿ ಸಾಧು ವೇಶ್ಯೆಯ ನೀರಸ ಜೀವನವನ್ನು ಸಾರ್ಥಕತೆಯತ್ತ ತಂದು ಸುಂದರಗೊಳಿಸಿದ, ಧನ್ಯ!"**

—ಹಿಂದಿ ಕಥೆಯೊಂದರ ಆಧಾರ